**ಪ್ರಶ್ನೆ : ವ್ಯಾಸದೇವರ ಜನ್ಮದಿನವನ್ನು ಗುರು ಪೂರ್ಣಿಮೆ ಎಂದು ಏಕೆ ಹೇಳುತ್ತಾರೆ?**

**ಸ್ವಾಮೀಜಿ:** ಒಂದು ಹೇಳಿಕೆಯಂತೆ, ವ್ಯಾಸರು ವೇದ, ಉಪನಿಷತ್ತುಗಳಲ್ಲಿನ ಕ್ಲಿಷ್ಟಕರ ತತ್ತ್ವವನ್ನು ಪುರಾಣಗಳ ಮೂಲಕ ಬಹು ಸುಲಭವಾಗಿ ಅರ್ಥವಾಗುವಂತೆ ಜನ ಸಾಮಾನ್ಯರಿಗೆ ಪರಿಚಯಿಸಿದ್ದಾರೆ. ಅದಕ್ಕಾಗಿ ವ್ಯಾಸ ಮಹರ್ಷಿಗಳು ಗುರುವಿನ ಸ್ಥಾನದಲ್ಲಿ ಇದ್ದುಕೊಂಡು, ಪೂಜ್ಯರಾಗಿದ್ದಾರೆ.

ಅದಲ್ಲದೆ, ಅವರು ವೇದಗಳನ್ನು ವಿಭಾಗಿಸಿಕೊಟ್ಟಿದ್ದಾರೆ. ಈ ಕಾರಣದಿಂದಲೂ ಅವರಿಗೆ 'ವೇದವ್ಯಾಸರು' ಎಂಬ ಇನ್ನೊಂದು ಹೆಸರು ಕೂಡ ಪ್ರಖ್ಯಾತಿಯಲ್ಲಿದೆ. ಇದಲ್ಲದೆ ಸಮಸ್ತ ಉಪನಿಷತ್ತುಗಳ ಮೂಲವಿಷಯವನ್ನು ತೆಗೆದು ಕೊಂಡು ಕ್ರಮಬದ್ಧವಾಗಿ 'ಬ್ರಹ್ಮಸೂತ್ರ' ಎಂಬ ಕೃತಿಯನ್ನೂ ಅವರು ರಚಿಸಿದ್ದಾರೆ. ಹದಿನೆಂಟು ಪುರಾಣಗಳನ್ನು ಕೂಡ ಅವರೇ ರಚಿಸಿದ್ದಾರೆಂದು ಪ್ರತೀತಿ. ಅವರೇ ಮಹಾ ಭಾರತವನ್ನೂ ರಚಿಸಿದ್ದು. ಮಹಾಭಾರತದ ಮುಖ್ಯಭಾಗ ಭಗವದ್ಗೀತೆ. ಇದರಲ್ಲಿ ಸಕಲಶಾಸ್ತ್ರಗಳ ಮುಖ್ಯವಿಚಾರ ಗಳನ್ನು ವ್ಯಾಸರು ಕ್ರಮಬದ್ಧವಾಗಿ ಸರಳವಾಗಿ ಆಯೋಜಿಸಿ ಕೊಟ್ಟಿದ್ದಾರೆ. ಮಹಾಭಾರತ, ಪುರಾಣಗಳಲ್ಲದೆ, ಒಂದು ಸಂಹಿತಾಗ್ರಂಥವನ್ನೂ ಅವರು ರಚಿಸಿದ್ದಾರೆಂದು ಹೇಳುತ್ತಾರೆ. ಇದರಲ್ಲಿ ಹಿಂದೂಧರ್ಮದ ಆಚಾರ, ಪದ್ಧತಿ – ಇವುಗಳ ವಿವರಣೆ ಇದೆ. ಪ್ರಸಿದ್ಧವಾದ ಹತ್ತೊಂಬತ್ತು ಸಂಹಿತೆಗಳಲ್ಲಿ ವ್ಯಾಸಸಂಹಿತೆ ಕೂಡ ಒಂದು.

**ಪ್ರಶ್ನೆ: ಸ್ವಾಮೀಜಿ, ಗುರುವನ್ನು ಹೇಗೆ ಗುರುತಿಸ ಬಹುದು, ಸ್ವಲ್ಪ ವಿವರಣೆ ಕೊಡಿ.**

**ಸ್ವಾಮೀಜಿ :** ಗುರುವಿನ ಪ್ರಧಾನ ಗುಣವೆಂದರೆ ಆತ ಶಾಸ್ತ್ರಜ್ಞ ಮತ್ತು ಬ್ರಹ್ಮನಿಷ್ಠನಾಗಿರುತ್ತಾನೆ. ಆತನ ಆಚಾರ–ವಿಚಾರಗಳೆಲ್ಲ ಶಾಸ್ತ್ರಸಮ್ಮತವಾಗಿರುತ್ತದೆ. ಸಂಪೂರ್ಣ ಸ್ವಾರ್ಥರಹಿತನಾಗಿ, ಶಿಷ್ಯನ ಮೇಲಿನ ಅಪಾರ ಕರುಣೆಯಿಂದ ಆತನನ್ನು ಅಜ್ಞಾನದ ಸಮುದ್ರದಿಂದ ಪಾರುಮಾಡಲು ಗುರುವು 'ಉಪಾಯ' ಮತ್ತು 'ಉಪದೇಶ' ಗಳನ್ನು ನೀಡುತ್ತಾನೆ. **ಶ್ರೋತ್ರಿಯ** ಮತ್ತು **ಬ್ರಹ್ಮನಿಷ್ಠ** –ಇವನ್ನು ಹೇಳುವುದು ಗುರುವಿನ ಬಗ್ಗೆಯೇ. ಶಾಸ್ತ್ರಜ್ಞಾನವಿಲ್ಲದೆ ನಿಜವಾದ ತತ್ತ್ವಜ್ಞಾನವನ್ನು ನೀಡಲು ಆಗುವುದಿಲ್ಲ. ಬ್ರಹ್ಮನಿಷ್ಠ ನಾಗಿರದಿದ್ದರೆ ಶಿಷ್ಯನ ಸಂಶಯವನ್ನು ದೂರಮಾಡಲು ಆಗದು. ಲೌಕಿಕ ಗುರುವಿಗೂ ಆಧ್ಯಾತ್ಮಿಕ ಜೀವನದ ಗುರುವಿಗೂ ಇದೇ ವ್ಯತ್ಯಾಸ. ಗುರುವು **'ಶ್ರೋತ್ರಿಯಂ ಬ್ರಹ್ಮ ನಿಷ್ಠಮ್'** –ಶಾಸ್ತ್ರವಿಚಾರದಲ್ಲಿ ಪ್ರಾಜ್ಞನಾಗಿರುತ್ತಾನೆ ಮತ್ತು ಬ್ರಹ್ಮಸ್ವರೂಪದಲ್ಲಿ ಪ್ರತಿಷ್ಠಿತನಾಗಿರುತ್ತಾನೆ. ಶಿಷ್ಯನು ಗುರುವಿನ ಹತ್ತಿರ ಸಮಿತ್ಪಾಣಿಯಾಗಿ, ಅಂದರೆ ಗುರುಸೇವೆಗೆ ಬೇಕಾದ ಮುಖ್ಯ ವಸ್ತುಗಳನ್ನು ತೆಗೆದುಕೊಂಡು, ವಿನೀತಭಾವದಿಂದ ಗುರುವನ್ನು ಸಮೀಪಿಸುತ್ತಾನೆ.

ಉಪನಿಷತ್ತುಗಳು ಮತ್ತು ಪುರಾಣಗಳಲ್ಲಿ ವಿವಿಧ ಕಡೆ ಹೇಳಿದೆ, ಯಾವ ವಿದ್ಯೆಯನ್ನು ವಿವರವಾಗಿ ತಿಳಿಯ ಬೇಕೋ ಅದನ್ನು ಬಲ್ಲ ವ್ಯಕ್ತಿಯನ್ನು ಶರಣು ಹೊಂದಬೇಕು ಎಂದು. ಇದು ಅಧ್ಯಾತ್ಮವಿದ್ಯೆಯ ಬಗ್ಗೆ ವಿಶೇಷವಾಗಿ ಅನ್ವಯವಾಗುತ್ತದೆ. ಯಾರು ಸಂಸಾರವೆಂಬ ದಾವಾ ನಲದಲ್ಲಿ ಬೆಂದು ಜರ್ಜರಿತರಾಗಿದ್ದಾರೋ ಅಂತಹವರು ದುಃಖನಿವೃತ್ತಿಗಾಗಿ ಗುರುವಿನ ಹತ್ತಿರ ಹೋಗಿ ಅನನ್ಯ ಭಾವದಿಂದ ಉಪದೇಶಕ್ಕಾಗಿ ಪ್ರಾರ್ಥಿಸಬೇಕು. "ಹೇಗೆ ಈ ಭವಸಾಗರದಿಂದ ಪಾರಾಗುವುದು? ನನ್ನ ನಿಜವಾದ ಆಶ್ರಯ ಎಲ್ಲಿದೆ? ಸಾಧನಾಪದ್ಧತಿ ನನಗೆ ಏನೂ ಗೊತ್ತಿಲ್ಲ. ಹೇ ಪ್ರಭೋ, ತಾವು ಕೃಪೆ ಮಾಡಿ, ಸಂಸಾರದುಃಖ ನಿವೃತ್ತಿಯ ಉಪಾಯವನ್ನು ಹೇಳಿಕೊಡಿ" ಎಂಬುದೇ ಆ ಭಾವ. ನಿಜವಾದ ಗುರುವಿಗೆ ಕೆಲವು ವಿಶೇಷ ಗುಣ ಗಳಿರಬೇಕು. ಗುರುವಿನ ಹತ್ತಿರ ಹೋಗುವ ಶಿಷ್ಯನಿಗೂ ಅಂದರೆ ಉಪದೇಶ ಪಡೆದು ನಿರ್ದಿಷ್ಟವಾದ ದಾರಿಯಲ್ಲಿ ಸಾಗುವವನಿಗೂ ಕೆಲವು ವಿಶೇಷ ಗುಣಗಳಿವೆ. ಅವೆಂದರೆ, **ಪವಿತ್ರತೆ, ಗುರುಗಳಲ್ಲಿ ಮತ್ತು ಗುರುವಾಕ್ಯದಲ್ಲಿ ಶ್ರದ್ಧೆ.**

**ಪ್ರಶ್ನೆ : ಶಿಷ್ಯನಿಗೆ ಯಾವ ಯಾವ ಯೋಗ್ಯತೆಗಳಿರಬೇಕು, ಸ್ವಾಮೀಜಿ?**

**ಸ್ವಾಮೀಜಿ:** ತನ್ನ ಆದರ್ಶದ ಧ್ಯೇಯವಸ್ತುವನ್ನು ಸೇರುವಲ್ಲಿ ಅವನಿಗೆ ತೀವ್ರ ಕಾತರವಿರಬೇಕು. ಕೇವಲ ಕುತೂಹಲಕ್ಕಾಗಿ ಮಂತ್ರದೀಕ್ಷೆ ತೆಗೆದುಕೊಳ್ಳುವುದು ಉಚಿತ ವಲ್ಲ. ಗುರುಗಳು ಕೊಟ್ಟ ನಿರ್ದೇಶನಗಳ ಮೇಲೆ ಅವನಿಗೆ ಪರಮನಿಷ್ಠೆ ಇರಬೇಕು.

ಶಿಷ್ಯನ ಚಾರಿತ್ರ್ಯ ನಿಷ್ಕಳಂಕವಾಗಿರಬೇಕು. ಗುರು, ಶಿಷ್ಯ – ಇಬ್ಬರ ಜೀವನವೂ ಪರಿಶುದ್ಧವಾಗಿರಬೇಕು. ಇಬ್ಬರ ಮೇಲೂ ಸಮಾನವಾದ ಜವಾಬ್ದಾರಿ ಇರುತ್ತದೆ. ಶಿಷ್ಯನು ಗರ್ವವಿಲ್ಲದೆ ವಿನಯವಂತನಾಗಿರಬೇಕು. ಗುರುವಿನ ಮೇಲೆ ಗಾಢವಾದ ಶ್ರದ್ಧೆ ಇರದಿದ್ದರೆ ಶಿಷ್ಯನಿಗೆ ಗುರುವಿನ ಆಶ್ರಯ ಸಿಗುವ ಸಂಭವವೇ ಇಲ್ಲ. ಶಿಷ್ಯನ ಸ್ವೀಕಾರಕ್ಕೆ ಅಂದರೆ ಮಂತ್ರದೀಕ್ಷೆಗೆ ಮೊದಲು ಗುರುವು ಶಿಷ್ಯನನ್ನು, ಅವನು ಯೋಗ್ಯನೋ ಅಲ್ಲವೋ ಎಂಬುದನ್ನು ಪರೀಕ್ಷಿಸಬೇಕು. ಗುರುವು ತನ್ನನ್ನು ಸ್ವೀಕರಿಸಿದ ಮೇಲೆ, ಶಿಷ್ಯನು ಗುರುವಿನ ಮೇಲೆ ಅಪಾರ ನಿಷ್ಠೆ ತೋರಿಸಿದಲ್ಲಿ ಅವನಿಗೆ ಸಂಪೂರ್ಣ ಲಾಭವಾಗುತ್ತದೆ. ಶಿಷ್ಯನ ನಮ್ರತೆಯ ಮೇಲೆ ಗುರುವಿನ ಜ್ಞಾನ, ಉಪದೇಶಗಳು ಲಭಿಸುತ್ತವೆ. ಅವು ಶಿಷ್ಯನನ್ನು ಪರಿಣತನನ್ನಾಗಿ ಮಾಡುತ್ತವೆ. **ವಿನಯ, ಅನನ್ಯ ಭಕ್ತಿ, ಪಾವಿತ್ರ್ಯ, ಸೇವಾಮನೋಭಾವ** – ಇವು ಇರದಿದ್ದರೆ ಗುರುವಿನ ಜೊತೆ ಇದ್ದರೂ ಏನೂ ಪ್ರಯೋಜನವಾಗುವುದಿಲ್ಲ. •

# ನೆನಪಿನಂಗಳದಿಂದ...

ಧಾರಾವಾಹಿ

ಪ್ರವ್ರಾಜಿಕಾ ಭಾರತೀಪ್ರಾಣಾ

**ಬೃ**ಂದಾವನದಲ್ಲಿ ಸಾಧಾರಣವಾಗಿ ಎಲ್ಲರೂ ವೈಷ್ಣವರೇ. ಕೊರಳಲ್ಲಿ ತುಳಸಿಮಾಲೆ ತೊಟ್ಟು ವೈಷ್ಣವರಾಗದಿದ್ದರೆ ಅಂಥವರನ್ನು ಅಲ್ಲಿನ ಜನ ಸ್ವಲ್ಪ ಕೀಳಾಗಿ ನೋಡುತ್ತಿದ್ದರು. "ನಮ್ಮದೂ ಗೋಪಾಲಮಂತ್ರ, ನಾವೂ ವೈಷ್ಣವರು" ಎಂದು ಸುಧೀರಾ ಅಕ್ಕ ಏನನ್ನೂ ಲೆಕ್ಕಿಸದೆ ಹೇಳುತ್ತಿದ್ದರು. ಶ್ರೀರಾಮಕೃಷ್ಣರು ಸರ್ವದೇವದೇವಿ ಸ್ವರೂಪರು; ಎಲ್ಲಾ ಭಾವಗಳಿಗೂ ಪ್ರಾಮುಖ್ಯತೆ ಕೊಟ್ಟವರು ಎಂತಲೇ ಸುಧೀರಾ ಅಕ್ಕ ಇಂಥ ಮಾತುಗಳನ್ನು ಹೇಳುತ್ತಿದ್ದರು. ನನ್ನನ್ನೊಬ್ಬಳನ್ನೇ ಇಲ್ಲಿ ಬಿಟ್ಟು ಹೊರಡುವಾಗ ಅವರು ಹೇಳಿದ್ದರು, "ನೀನು ತುಳಸಿಮಾಲೆ ತೊಟ್ಟು, ತುಳಸಿಮಾಲೆಯಲ್ಲಿಯೇ ಶ್ರೀರಾಮಕೃಷ್ಣರ ನಾಮಜಪ ಮಾಡು. ಇಲ್ಲದಿದ್ದರೆ ನೀನು ಇಲ್ಲಿ ನಾನಾ ರೀತಿಯ ತೊಂದರೆಗೆ ಸಿಕ್ಕಿಕೊಳ್ಳಬೇಕಾಗುತ್ತದೆ." ತುಳಸಿಮಾಲೆಯ ವ್ಯವಸ್ಥೆ ಮಾಡುವಂತೆ ನವನಳಿನಿಗೆ ಹೇಳಿ ಹೋದರು. ಆಕೆ ತುಂಬ ಆನಂದದಿಂದ ವ್ಯವಸ್ಥೆ ಮಾಡಲಾರಂಭಿಸಿದಳು. ಒಂದು ಉತ್ಸವವೇ ನಡೆಯಿತು! ನನಗೆ ತುಳಸಿಮಾಲೆ ಕೊಡಲು ಒಬ್ಬ ಬಾಬಾಜಿಯೂ ಬಂದನು. ಇದೆಲ್ಲವನ್ನೂ ಕಂಡು ನನಗೆ ಅಳು ಬರುವಂತಾಯಿತು. ನನ್ನ ಕಣ್ಣಲ್ಲಿ ನೀರು ಕಂಡು, ರಾಧಾರಾಣಿಯ ಭಾವ ಉದ್ದೀಪನವಾಗಿ ಹುಡುಗಿ ಕಣ್ಣೀರು ಹರಿಸುತ್ತಿದ್ದಾಳೆ ಎಂದೇ ಎಲ್ಲರೂ ಅಂದುಕೊಂಡರು. "ಆಹಾ! ಎಂಥ ಭಕ್ತಿ ಈ ಹುಡುಗಿಯದು" ಎನ್ನಲಾರಂಭಿಸಿದರು. ತುಳಸಿಮಾಲೆ ತೊಡಿಸಿ 'ಹರೇಕೃಷ್ಣ, ಹರೇಕೃಷ್ಣ' ಜಪ ಮಾಡುವುದನ್ನೂ ತೋರಿಸಿಕೊಟ್ಟರು. ಈ ದೀಕ್ಷೆಯ ಉತ್ಸವ ಮುಗಿದ ನಂತರ ನಾನು ಕೋಪದಿಂದ ಸುಧೀರಾ ಅಕ್ಕನಿಗೆ ಬೈದು ಒಂದು ದೊಡ್ಡ ಪತ್ರ ಬರೆದೆ, "...ಕೊನೆಗೂ ನನ್ನ ಗತಿ ಇಲ್ಲಿಗೆ ಬಂದಿತೆ? ಹರೇಕೃಷ್ಣ ಮಂತ್ರ ತೆಗೆದುಕೊಂಡು ಬಾಬಾಜಿಗಳ ಜೊತೆ ತಿರುಗಲೆ?... "

ಈ ಎಲ್ಲಾ ಸಂಗತಿಗಳ ಬಗ್ಗೆ ನವನಳಿನಿಯ ಜೊತೆ ವಾದವಿವಾದಗಳೂ ನಡೆದುಹೋದವು. ಆಕೆ ಅಪ್ಪಣೆ ಮಾಡುವಂತೆ ನನ್ನನ್ನು ಬೆದರಿಸಿ ಹೇಳಿದಳು, "ಸುಧೀರಾ ನಿನ್ನನ್ನು ನನ್ನ ಜೊತೆ ಬಿಟ್ಟುಹೋಗಿದ್ದಾಳೆ. ನಾನು ಹೇಳಿದಂತೆ ನೀನು ಕೇಳಲೇಬೇಕು. ಇಲ್ಲದಿದ್ದರೆ ನಿನ್ನ ದಾರಿ ನೀನು ನೋಡಿಕೋ" ಏನು ಮಾಡಿದರೂ ಅವಳು ಹೇಳಿದಂತೆ ಕೇಳಬಾರದು ಎಂದು ನಿಶ್ಚಯಿಸಿ ನಾನೂ ತಿರುಗಿ ಬಿದ್ದು, ಆ ಮನೆಯ ಕೆಳಭಾಗದಲ್ಲಿದ್ದ ಗೋಪಿದಾಸಿಯ ಬಳಿ ಹೋದೆ. ಆಕೆಗೆ ಸುಧೀರಾ ಅಕ್ಕ ಮೊದಲೇ ನನ್ನ ಬಗ್ಗೆ ಎಲ್ಲವನ್ನೂ ಹೇಳಿಟ್ಟದ್ದು ನನಗೆ ಗೊತ್ತಿರಲಿಲ್ಲ. ಮುಂದೇನು ಮಾಡಲಿ, ಎಲ್ಲಿಗೆ ಹೋಗಲಿ ಎಂದು ಚಿಂತೆಗೀಡಾಗಿದ್ದೆ. ಸುಧೀರಾ ಅಕ್ಕ, ತಾವು ಹೊರಡುವಾಗ ಗೋಪಿದಾಸಿಗೆ ಹೇಳಿದ ಮಾತುಗಳನ್ನು ಅವರ ಬಾಯಿಂದಲೇ ಕೇಳಿದ ಮೇಲೆ, ನಾನು ಅವರ ಜೊತೆಯೇ ಇರಲಾರಂಭಿಸಿದೆ. ನವನಳಿನಿ ರಾಧಾ ಕುಂಡ ಎಂಬ ಜಾಗದಲ್ಲಿ ತಪಸ್ಸು ಮಾಡಲು ಹೊರಟುಹೋದಳು.

ಗೋಪಿದಾಸಿಗೆ ಸಣ್ಣದೊಂದು ಗುಡಿಸಲಿತ್ತು. ನಾನು ಅಲ್ಲೇ ನೆಲೆಸಿದೆ. ಅವರು ಹೇಗೆ ಕಷ್ಟದಿಂದ ಜೀವಿಸುತ್ತಿದ್ದರೋ ಹಾಗೆಯೇ ನಾನೂ ಇರಲಾರಂಭಿಸಿದೆ. ಈ ಸಮಯದಲ್ಲಿ ತುಂಬ ಜಪಮಾಡುತ್ತಿದ್ದೆ. ಇನ್ನೇನೂ ಅಂಥ ಕೆಲಸವಿರಲಿಲ್ಲ. 'ಶ್ರೀರಾಮಕೃಷ್ಣ ವಚನವೇದ' ಓದುವುದು ಹಾಗೂ ಜಪ ಮಾಡುವುದು – ಇದು ಇಡೀ ದಿನ ನಡೆಯುತ್ತಿತ್ತು. ಸಂಖ್ಯೆಯಿಟ್ಟು ಜಪ ಮಾಡುವುದನ್ನು ಅವರಿಂದಲೇ ಕಲಿತೆ. ಒಂದು ದಿನಕ್ಕೆ ಲಕ್ಷ ಜಪ ಆಗುತ್ತಿತ್ತು. ಸುಧೀರಾ ಅಕ್ಕ ಒಂದಾದ ಮೇಲೊಂದು ಪತ್ರಗಳನ್ನು ಬರೆದು ನನಗೆ ಧೈರ್ಯಕೊಡುತ್ತಿದ್ದರು. ಎಂಥ ಸುಂದರ ಪತ್ರಗಳವು! ಆ ಪತ್ರಗಳನ್ನು ಓದಿ ಈ ಎಲ್ಲಾ ಕಷ್ಟಗಳನ್ನೂ ಆನಂದದಿಂದಲೇ ಸಹಿಸಿಕೊಳ್ಳುತ್ತಿದ್ದೆ.

ಏಕಾದಶಿಯ ದಿನ 'ಪಾರಸ್' (ದೇವರಿಗೆ ನೈವೇದ್ಯ ಮಾಡಿದ ಅನ್ನ, ರೊಟ್ಟಿ ಇತ್ಯಾದಿ) ಸಿಗುತ್ತಿರಲಿಲ್ಲ. ಗೋಪಿದಾಸಿ ಹೇಳಿಕೊಟ್ಟಂತೆ ನಾನು ಆಗಾಗ ಒಂದೋ ಎರಡೋ ರೊಟ್ಟಿಗಳನ್ನು ಒಂದು ಚೀಲದಲ್ಲಿ ಹಾಕಿಡುತ್ತಿದ್ದೆ. ಅವುಗಳು ಒಣಗಿ ಹಪ್ಪಳದಂತಾಗಿರುತ್ತಿದ್ದವು. ಅವುಗಳನ್ನು ಚೂರು ಚೂರು ಮಾಡಿ ಗೋಪಿದಾಸಿ ಕೊಟ್ಟ ಮಜ್ಜಿಗೆಯಲ್ಲಿ ನೆನೆಸಿ ಎರಡು ಹೊತ್ತು ತಿನ್ನುತ್ತಿದ್ದೆ. ಕೋಣೆಯ ಬಾಡಿಗೆ ೪ ಆಣೆ, ಪಾರಸ್‌ಗೆ ೩ ರೂಪಾಯಿ, ತಲೆಗೆ ಹಚ್ಚಲು ಸ್ವಲ್ಪ ಎಣ್ಣೆ ಹಾಗೂ ಸ್ವಲ್ಪ ಬೆಲ್ಲ ಕೊಂಡುಕೊಳ್ಳುತ್ತಿದ್ದೆ. ಗೋಪಿದಾಸಿ ಸ್ವಂತ ಮಗಳಂತೆ ನನ್ನನ್ನು ನೋಡಿಕೊಳ್ಳುತ್ತಿದ್ದರು. ಒಬ್ಬಳೇ ದೇವಸ್ಥಾನಕ್ಕೆ ಹೋಗಿ ಅಲ್ಲಿ ಬಹು ಹೊತ್ತು ಜಪ ಧ್ಯಾನ ಮಾಡುತ್ತಿದ್ದೆ.

ಬೃಂದಾವನದ ಸೆಖೆ ಸಹಿಸಲಾಗುತ್ತಿರಲಿಲ್ಲ ಆ ಭಯಂಕರ ಶಾಖದಿಂದ ಜ್ವರ ಬಂದಿತು, ಪ್ರಜ್ಞೆ ಇಲ್ಲದಂತಾಯಿತು. ಗೋಪಿದಾಸಿ ತುಂಬ ಸೇವೆ ಮಾಡಿದರು. ಅಲ್ಲಿಯವರೆಗೂ ನೆಲದ ಮೇಲೆಯೇ ಮಲಗುತ್ತಿದ್ದೆ. ಗೋಪಿದಾಸಿ ಒಂದು